ಟೀವಿಯಲ್ಲಿ ಬರುತ್ತಿದ್ದ ವಾರ್ತೆಗಳು ಅವಳ ಕಿವಿ ತಲುಪಿದವು. ಇಷ್ಟೆಲ್ಲ ಜನರ ಪ್ರಾರ್ಥನೆ, ಜಗತ್ತಿನಾದ್ಯಂತ ಡಾಕ್ಟರುಗಳ ಸಲಹೆ ಹಾಗೂ ಸ್ಲೋನ್ ಆಸ್ಪತ್ರೆಯ ಡಾಕ್ಟರುಗಳು ಹಗಲು ರಾತ್ರಿಯೆನ್ನದೆ ಮಾಡಿದ ಪ್ರಯತ್ನಗಳು ಫಲ ಕೊಡದೆ ಮೀತಾ ಕೊನೆಯುಸಿರೆಳೆದಿದ್ದಳು. ಮಿತಾಲಿಯನ್ನು ಮಲಗಿಸಿ ವಿದ್ಯಾ ಟೀವಿಯೆದುರು ಬಂದು ಕುಳಿತ ಕೆಲವೇ ನಿಮಿಷದಲ್ಲಿ ಶುಭಂಕರ್ ಫೋನ್ ಮಾಡಿದ್ದ. 'ಮೀತಾಳ ಅಂತ್ಯ ಸಂಸ್ಕಾರಕ್ಕೆ ಸಾತ್ವಿಕ್ ಜೊತೆ ಹೋಗುತ್ತಿದ್ದೇನೆ. ನಾಳೆ ಸಾಯಂಕಾಲದೊಳಗೆ ಬರುತ್ತೇವೆ' ಎಂದಷ್ಟೆ ಹೇಳಿ ಫೋನ್ ಇಟ್ಟುಬಿಟ್ಟ. ಮರುದಿನ ಮಧ್ಯರಾತ್ರಿಯ ಸುಮಾರಿಗೆ ಬಂದು ಮಲಗಿದ ಶುಭಂಕರ್ ಬೆಳಿಗ್ಗೆ ಮೀತಾಳ ಅಂತ್ಯಯಾತ್ರೆಯ ವರದಿ ಒಪ್ಪಿಸಿದ. ಅವನ ಮಾತಿನಲ್ಲಿ ದುಃಖ, ನಿರಾಸೆ ಇಲ್ಲವೆ ಅಸಹಾಯಕತೆಯಿರಲಿಲ್ಲ. ತನ್ನಿಷ್ಟದ ಕಲಾವಿದೆಯ ಜೊತೆ ನಾನು ಕಡೆತನಕವಿದ್ದೆ ಅನ್ನುವ ಸಮಾಧಾನ ಅವನಿಗಿರಬೇಕು ಅಂದುಕೊಂಡಳು.



ಮುಂದಿನ ಹದಿನೈದು ದಿನಗಳವರೆಗೆ ಶುಭಂಕರ್ ಆಫೀಸಿಗೆ ಬೇಗ ಹೋಗಿ ತಡ ರಾತ್ರಿಯಾಗುವಾಗ ಮನೆಗೆ ಬರಲಾರಂಭಿಸಿದ. ದಿನ ಬೆಳಗಾದರೆ ಸಾತ್ವಿಕ್‌ನ ಫೋನ್ ಬರುತ್ತಿದ್ದವು. ವಿದ್ಯಾ ಕೇಳಿದರೆ ಏನಾದರೊಂದು ಉತ್ತರ ಕೊಟ್ಟು ಅವಳನ್ನು ಸುಮ್ಮನಾಗಿಸುತ್ತಿದ್ದ. ಅವನ ಸಂಸ್ಥೆಯ ತಾಂತ್ರಿಕ ಕೆಲಸಗಳ ಬಗ್ಗೆ ವಿದ್ಯಾಳಿಗೆ ಅಷ್ಟೇನೂ ತಿಳಿಯುತ್ತಲೂ ಇರಲಿಲ್ಲ. 'ನಾವಿಬ್ಬರೂ ಒಂದು ಮಹತ್ವವಾದ ಪ್ರಾಜೆಕ್ಟನ್ನು ಮುಗಿಸಬೇಕಿದೆ. ಸಮಯ ಬಂದಾಗ ನಿನಗೂ ಹೇಳುತ್ತೇನೆ' ಎಂದಷ್ಟೇ ಹೇಳಿ ಸುಮ್ಮನಾಗುತ್ತಿದ್ದ.

ಮೂರು ವಾರಗಳ ನಂತರ ರಾತ್ರಿ ಮಗಳು ಮಲಗಿದ ಮೇಲೆ ವಿದ್ಯಾಳನ್ನು ಹೊರಕೋಣೆಯಲ್ಲಿ ಕರೆದುಕೊಂಡು ಬಂದು ತನ್ನೆದುರು ಕೂರಿಸಿದ ಶುಭಂಕರ್ 'ನಿನ್ನ ಜೊತೆ ಮಹತ್ವವಾದ ವಿಷಯದ ಬಗ್ಗೆ ಸ್ವಲ್ಪ ಮಾತಾಡುವುದಿದೆ' ಅಂದ ಗಂಭೀರವಾಗಿ. ವಿದ್ಯಾ ಕುತೂಹಲದಿಂದ ಕೇಳಲು ಮುಂದಾದಳು.

'ಮೂರು ವಾರಗಳಿಂದ ನಾನೂ ಸಾತ್ವಿಕ ಒಂದು ಮಹತ್ವವಾದ ಪ್ರಾಜೆಕ್ಟಿನ ಮೇಲೆ ಕೆಲಸ